**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 513/09**

**ಸಿ.ಡಬ್ಲ್ಯೂ-4 ಪಿ.ಡಬ್ಲ್ಯೂ- 7**

| | | |
|---|---|---|
| ಸಾಕ್ಷಿದಾರರ ಹೆಸರು | : | ಬಸವರಾಜಪ್ಪ |
| ತಂದೆಯ/ ಗಂಡನ ಹೆಸರು | : | ರಂಗಪ್ಪ |
| ವಯಸ್ಸು | : | 69 ವರ್ಷ |
| ಉದ್ಯೋಗ | : | ನಿವೃತ್ತ ವಾಣಿಜ್ಯ ತೆರಿಗೆ ಅಧಿಕಾರಿ |
| ವಾಸ ಸ್ಥಳ | : | ತುಮಕೂರು |

**ದಿನಾಂಕ 14.08.2025 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು ವಾನಿಜ್ಯ ತೆರಿಗೆ ಇಲಾಖೆಯಲ್ಲಿ 2006 ರಿಂದ 2009 ವರೆಗೆ ಮೈಸೂರು ವಲಯದಲ್ಲಿ ಕೆಲಸ ನಿರ್ವಹಿಸಿರುತ್ತೇನೆ. ದಿಃ 22.06.2009 ರಲ್ಲಿ ನಾನು ಕಛೇರಿಯಲ್ಲಿ ಇದ್ದಾಗ ಚಾಸಾ1 ರವರು ನನ್ನನ್ನು ಅವರ ಕಛೇರಿಗೆ ಬರಲು ಹೇಳಿದ್ದು, ಸಂಜೆ 4.00 ಗಂಟೆಗೆ ಯಾವುದೋ ಮಾಹಿತಿ ಇದೆ ಎಂದು ನನ್ನನ್ನು ಚಾಸಾ 5, 6 ರವರನ್ನು ಕರೆದಿರುತ್ತಾರೆ. ನಂತರ ವಿರಾಜಪೇಟೆಯಿಂದ ಸರಗೂರು ಮಾರ್ಗವಾಗಿ ಅಕ್ರಮವಾಗಿ ಕರಿಮೇಣಸು ಸಾಗಾಣಿಕೆ ಆಗುತ್ತಿದೆ ಎಂದು ಗಸ್ತಿಗೆ ಹೋಗಬೇಕು 8.30 ಗೆ ಬನ್ನಿ ಎಂದು ತಿಳಿಸಿರುತ್ತಾರೆ, ಅದರಂತೆ 8.30 ಗೆ ಕಛೇರಿ ಬಿಟ್ಟು ಇಲಾಖಾ ವಾಹನ ಸಂಖ್ಯೆ KA-02-G447 ರಲ್ಲಿ 9 ಗಂಟೆಗೆ ಮೈಸೂರು ಬಿಟ್ಟು ನಂಜನಗೂಡು, ಬೇಗೂರು, ಗುಂಡ್ಲುಪೇಟೆ ಮಾರ್ಗವಾಗಿ ಯಡಿಯಾಳ ಕಡೆಗೆ ಬರುವಾಗ ಒಂದು ವಾಹನ ನಮ್ಮನ್ನು

ಹಿಂಭಾಲಿಸುತ್ತಿದ್ದು, ಹೆಡ್ ಲೈಟ್ ಮೂಲಕ ನಮಗೆ ಕಾಣಿಸುತ್ತಿದ್ದು, ನಾವು ಯಾವುದೋ ವಾಹನ ಇರಬೇಕು ಎಂದು ವಾಹನ ಪಕ್ಕಕ್ಕೆ ನಿಲ್ಲಿಸಿರುತ್ತೇವೆ, ನಂತರ ಸದರಿ ವಾಹನ ನಮ್ಮ ಮುಂದೆ ಹೋಗಿರುತ್ತದೆ. ನಂತರ ನಾವು ಯಡಿಯಾಳ ಕಡೆಗೆ ಹೋದಾಗ ಬೆಳಿಗ್ಗಿನ ಜಾವ 4 ಗಂಟೆ ಸಮಯದಲ್ಲಿ ನುಗು ಜಲಾಶಯದ ಹತ್ತಿರ ನಮ್ಮ ವಾಹನವನ್ನು ಓವರಟೇಕ್ ಮಾಡಿ ಒಂದು ವಾಹನ ನಿಲ್ಲಿಸಿರುತ್ತಾರೆ, ಆಗ ಚಾಸಾ 1 ರವರು ಯಾಕೆ ವಾಹನವನ್ನು ಅಡಗಟ್ಟಿ ನಿಲ್ಲಿಸಿರುತ್ತೀರಾ ಎಂದು ಕೇಳಿದಾಗ ಆಸಾಮಿಗಳು ನೀವು ಯಾರು ಇಲ್ಲಿ ಯಾಕೆ ಬಂದಿದ್ದಿರಾ ಎಂದು ಪ್ರಶ್ನಿಸಿರುತ್ತಾರೆ, ಆಗ ಚಾಸಾ 1 ರವರು ನಮ್ಮ ಅಧಿಕಾರಿಗಳು ತಿಳಿಸಿರುತ್ತಾರೆ. ಆಗ ಆಸಾಮಿಗಳು ಕರಿಮೇಣಸು ಲಾರಿ ಬರುತ್ತಿದೆ ನಮಗೆ ತೊಂದರೆ ಕೊಡಬೇಡಿ, ಹೊರಟುಹೋಗಿ ಎಂದು ತಿಳಿಸಿರುತ್ತಾರೆ. ಆಗ ಚಾಸಾ 1 ರವರು ಚಾಲಕನನ್ನು ಹಿಡಿಯಿರಿ ಎಂದು ಹೇಳಿರುತ್ತಾರೆ. ಆಗ ಮತ್ತು ಚಾಸಾ 5 ರವರು ಆಸಾಮಿಯನ್ನು ಹಿಡಿಯಲು ಹೋದಾಗ ಕತ್ತಲೆಯಲ್ಲಿ ತಪ್ಪಿಸಿಕೊಂಡಿರುತ್ತಾರೆ ವಾಹನದಲ್ಲಿ ಇದ್ದ ಇನ್ನೊಬ್ಬ ಆಸಾಮಿ ಸಹ ಓಡಿ ಹೋಗಿರುತ್ತಾನೆ. ಸದರಿ ವಿಚಾರವನ್ನು ಚಾಸಾ1 ರವರು ಮೇಲಧಿಕಾರಿಯವರಿಗೆ ತಿಳಿಸಿರುತ್ತಾರೆ. ನನ್ನನ್ನು ಮತ್ತು ಚಾಸಾ 5 ರವರನ್ನು ಸದರಿ ವಾಹನಕ್ಕೆ ಕಾವಲಾಗಿ ಇರಿಸಿ ಸರಗೂರು ಪೊಲೀಸ್ ಠಾಣೆಗೆ ದೂರು ಕೊಟ್ಟಿರುತ್ತಾರೆ. ಸದರಿ ವಿಚಾರವಾಗಿ ಹೇಳಿಕೆ ಕೊಟ್ಟಿರುತ್ತೇನೆ.

**ಪಾಟೀ ಸವಾಲುಃ  ಆರೋಪಿತರ ಪರ ವಕೀಲರಿಂದಃ**

ನಾನು ವಾಣಿಜ್ಯ ತೆರಿಗೆ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದೆ. ಘಟನೆ ನಡೆದಾಗ ನಾನು ಘಟನಾಸ್ಥಳದಲ್ಲಿ ಇದ್ದೆ.  ದಿಃ23.06.2009 ರ ಬೆಳಿಗ್ಗೆ 4 ಗಂಟೆ ಸಮಯದಲ್ಲಿ ನುಗು ಜಲಾಶಯದ ರಸ್ತೆಯಲ್ಲಿ ಘಟನೆ ನಡೆದಿರುತ್ತದೆ. ಕೇಂದ್ರ ಕಛೇರಿಯನ್ನು ರಾತ್ರಿ 9 ಗಂಟೆಗೆ ಬಿಟ್ಟಿರುತ್ತೇವೆ. ಸದರಿ ದಿನ ನಾನು, ಚಾಸಾ 1, 5 ಮತ್ತು 6 ಹೊರಟಿರುತ್ತೇವೆ. ಕಛೇರಿ ಬಿಡುವಾಗ ದಿನಚರಿಯಲ್ಲಿ ಪುಸ್ತಕದಲ್ಲಿ ಸಹಿ ಮಾಡಿದ್ದೀರಾ ಎಂದರೆ ಆ ರೀತಿ ದಿನಚರಿ ನಿರ್ವಹಣೆ ಮಾಡುವುದಿಲ್ಲ ಎಂದು ನುಡಿಯುತ್ತಾರೆ. ನಾವು ಗಸ್ತು ಪುಸ್ತಕದಲ್ಲಿ ಸಹಿ ಮಾಡುವುದಿಲ್ಲ ನಮ್ಮ ಮೇಲಾಧಿಕಾರಿ ನಿರ್ವಹಣೆ ಮಾಡುತ್ತಾರೆ. ಸದರಿ ಪ್ರಕರಣದಲ್ಲಿ ನಾನು ಭಾಗಿ ಆಗಿಲ್ಲ ಆದ ಕಾರಣ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಮೈಸೂರಿನಿಂದ ನಂಜನಗೂಡು, ಗುಂಡ್ಲುಪೇಟೆ ಮಾರ್ಗವಾಗಿ ಹೋಗಿರುತ್ತೇವೆ. ಎಲ್ಲಾ ಕಡೆ ರಸ್ತೆ ಗಸ್ತು ಮಾಡಿಕೊಂಡು ಹೋಗಿರುತ್ತೇವೆ. ಸದರಿ ವಿಚಾರವನ್ನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ. ಸದರಿ ವಿಚಾರವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರನ್ನು ಇದೇ ಮೊದಲ ಬಾರಿ

ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಿನ ಆರೋಪಿ ಯಾವ ಬಣ್ಣದ ಬಟ್ಟೆ ಧರಿಸಿದ್ದರು ಎಂದರೆ ಗಮನಿಸಿಲ್ಲ ಎಂದು ನುಡಿಯುತ್ತಾರೆ. ಆರೋಪಿಯನ್ನು ಎಷ್ಟು ದೂರದಿಂದ ನೋಡಿರುತ್ತೀರಾ ಎಂದರೆ ನಮ್ಮ ವಾಹನದ ಬಳಿ ಇದ್ದರು ಎಂದು ನುಡಿಯುತ್ತಾರೆ. ಒಬ್ಬರು ನಮ್ಮ ಜೀಪಿನ ಬಳಿ ಬಂದಿರುತ್ತಾರೆ ಅವರ ಹೆಸರು ಗೊತ್ತಿಲ್ಲ. ಸದರಿ ದಿನ ಆರೋಪಿತರು ಸ್ಥಳದಲ್ಲಿ ಇರಲಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಿನ ಆರೋಪಿತರನ್ನು ಹಿಡಿಯಲು ಪ್ರಯತ್ನಿಸಿರುತ್ತಾರೆ ಆಸಾಮಿಗಳು ಓಡಿ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಆಸಾಮಿಗಳು ಯಾವ ಕಡೆ ಹೋಗಿರುತ್ತಾರೆ ಎಂದು ಗೊತ್ತಿಲ್ಲ. ನುಗು ಜಲಾಶಯದ ಬಲಕ್ಕೆ ಹೋಗಿರುತ್ತಾರೆ ಎಂದು ನುಡಿಯುತ್ತಾರೆ, ಅವರಿಗೂ ನಮಗೂ 100 ಅಡಿ ಅಂತರ ಇರುತ್ತದೆ. ನನ್ನ ಜೊತೆ ಚಾಸಾ 5 ಮತ್ತು 6 ಸಹ ಹಿಡಿಯಲು ಪ್ರಯತ್ನಿಸಿರುತ್ತಾರೆ. ಸದರಿ ದಿನ ನಾನು ಘಟನೆಯಲ್ಲಿ ಭಾಗಿಯಾಗಿಲ್ಲ ಚಾಸಾ 1 ರವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ್ಥಳದ ಚೆಕ್ಕು ಬಂದಿ ಗೊತ್ತಿಲ್ಲ. ಆರೋಪಿತರಿಗೂ ಘಟನೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು).

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ.ಕೋಟೆ.**